**ದಿನಾಂಕಃ 18.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಬಿ.ಎಸ್.ಎನ್. ವಕೀಲರಿಂದಃ**

ನಾನು ಬಿ.ಎಸ್ಸಿ. ಓದಿರುವುದರಿಂದ ಕನ್ನಡ-ಇಂಗ್ಲೀಷ್ ಓದಲು-ಬರೆಯಲು ಬರುತ್ತದೆ. ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಂತೆ ವಕೀಲರು ಕರೆ ಮಾಡಿ ತಿಳಿಸಿರುತ್ತಾರೆ. ನನ್ನ ಗುರುತಿನ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನಿಡಿ.1 ರಲ್ಲಿ ಸಹಿ ಮಾಡಿರುತ್ತೇನೆ ಎಂದು ಹೇಳಿರುವ ಸಹಿಗೆ ಪೂರಕವಾಗಿ ನನ್ನ ಸಹಿ ಎಂದು ಹೇಳಿ ಯಾವುದೇ ದಾಖಲೆ ಕೊಟ್ಟಿಲ್ಲ. ಪಿಟ್ಲಾಲಿ ಗ್ರಾಮ ಮತ್ತು ಕಸವನಳ್ಳಿ ಗ್ರಾಮ ಬೇರೆ ಬೇರೆ ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಪದವಿ ಮಾಡುತ್ತಿರುವಾಗಲೇ ಪರಿಚಯ ಇರುತ್ತೇವೆ. 2 ನೇ ಪ್ರತಿವಾದಿ ಊರಿಗೂ ನಮ್ಮ ಊರಿಗೂ 4 ಕಿ.ಮಿ. ಅಂತರ ಇರುತ್ತದೆ.

2. ನನಗೆ ಕೊನೆಯ ಬಾರಿ 1 ನೇ ಪ್ರತಿವಾದಿ ಹಿರಿಯೂರು ತಾಲ್ಲೂಕು ಕಛೇರಿ ಬಳಿ ಸಿಕ್ಕಿರುತ್ತಾರೆ, ಆದರೆ ದಿನಾಂಕ ಗೊತ್ತಿಲ್ಲ. ನನಗೆ 2 ನೇ ಪ್ರತಿವಾದಿ ಪ್ರತಿನಿತ್ಯ ಸಿಗುತ್ತಿರುತ್ತಾರೆ ಎಂದರೆ ಸರಿಯಲ್ಲ. ನನಗೆ 2 ನೇ ಪ್ರತಿವಾದಿ 15 ವರ್ಷದಿಂದ ಪರಿಚಯ. ನಾನು 2 ನೇ ಪ್ರತಿವಾದಿ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ. ನಾನು ಸಹಿ ಮಾಡುವ ಮೊದಲು ದಾಖಲೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಿಡಿ.1 ರ ವಿಲ್ ನ್ನು ಹಿರಿಯೂರು ತಾಲ್ಲೂಕು ಕಛೇರಿ ಬಳಿ ಕುಮಾರ್ ಟೈಪ್ ಮಾಡಿ ಉಪ-ನೊಂದಾಣಾಧಿಕಾರಿಗಳ ಕಛೇರಿಯಲ್ಲಿ ಮಧ್ಯಾಹ್ನ 2.30 ಕ್ಕೆ ಸಹಿ ಮಾಡಿರುತ್ತೇನೆ. ನಿಡಿ.1 ರ ವಿಲ್ ಗೆ 1 ಬಾರಿ ಸಹಿ ಮಾಡುವಾಗ ನಾನು, 1 ನೇ ಪ್ರತಿವಾದಿ ಮತ್ತು ಶೇಖರಪ್ಪ ಇರುತ್ತೇವೆ. ನಿಡಿ.1 ರ ವಿಲ್ ತಯಾರಾದ ನಂತರ ಹೋಗಿರುತ್ತೇನೆ. 1 ನೇ ಪ್ರತಿವಾದಿ ನಿಡಿ.1 ರ ವಿಲ್ ನ್ನು ಕೊಟ್ಟ ನಂತರ ಓದಿ ಸಹಿ ಮಾಡಿರುತ್ತೇನೆ. ನನಗೆ ನಿಡಿ.1 ರ ತಯಾರು ಮಾಡಿದ ದಿನಾಂಕ ಗೊತ್ತಿಲ್ಲ. ನಿಡಿ.1 ರ ವಿಲ್ ಗೆ ಸಹಿ ಮಾಡಿದ ದಿನಾಂಕ ಸಹ ಗೊತ್ತಿಲ್ಲ. ನಿಡಿ.1 ರ ವಿಲ್ ಕನ್ನಡ ಭಾಷೆಯಲ್ಲಿರುತ್ತದೆ. ನಿಡಿ.1 ರ ವಿಲ್ 5-6 ಪುಟ ಇರುತ್ತದೆ. ನಾನು ನಿಡಿ.1 ರ ವಿಲ್ ಗೆ ಸಹಿ ಮಾಡುವಾಗ 1 ನೇ ಪ್ರತಿವಾದಿ ತಾಲ್ಲೂಕು ಕಛೇರಿ ಬಳಿ ಇರುತ್ತಾರೆ. ನಿಡಿ.1 ಕ್ಕೆ ಮೊದಲು 1 ನೇ ಪ್ರತಿವಾದಿ ಇಂಗ್ಲೀಷ್ ನಲ್ಲಿ ಸಹಿ ಮಾಡಿದ ನಂತರ ನಾನು ಜೊತೆಯಲ್ಲೇ ಇದ್ದು ಸಹಿ

ಮಾಡಿರುತ್ತೇನೆ. 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳು ನಿಡಿ.1 ರ ವಿಲ್ ನ್ನು ಮಾಡುವಾಗ ಯಾರು ಇರುವುದಿಲ್ಲ. ನಿಡಿ.1 ಕ್ಕೆ ವಿಲ್ ಗೆ ಸಹಿ ಮಾಡಿದ ನಂತರ ಯಾರಿಗೂ ಹೇಳಿರುವುದಿಲ್ಲ. 1 ನೇ ಪ್ರತಿವಾದಿ ನನಗೆ ನಿಡಿ.1 ಕ್ಕೆ ಸಹಿ ಮಾಡುವಂತೆ ಮೊದಲು ಕೇಳಿಲ್ಲ. 1 ನೇ ಪ್ರತಿವಾದಿಗೆ ಕಿಡ್ನಿ ವೈಫಲ್ಯ ಇರುವ ಬಗ್ಗೆ ಗೊತ್ತಿರುತ್ತದೆ. 1 ನೇ ಪ್ರತಿವಾದಿ ಮೃತರಾದ ದಿನಾಂಕ ಗೊತ್ತಿಲ್ಲ. 1 ನೇ ಪ್ರತಿವಾದಿ ಅನಾರೋಗ್ಯದಿಂದ ಮೃತರಾಗಿರುವ ಬಗ್ಗೆ ಪಿಟ್ಲಾಲಿಗೆ ಹೋದಾಗ ಗ್ರಾಮಸ್ಥರು ಹೇಳಿರುತ್ತಾರೆ. ನಾನು ನೊಂದಾಣಾಧಿಕಾರಿ ಕಛೇರಿಯಲ್ಲಿ 30 ನಿ. ಇರುತ್ತೇನೆ. ನಾನು 2 ನೇ ಪ್ರತಿವಾದಿ ಕರೆದಾಗ ಬಂದು ಸಾಕ್ಷಿ ಹೇಳುತ್ತಿರುತ್ತೇನೆ. ನಾನು ಸಹಿ ಮಾಡುವಾಗ ನನ್ನ ವಿಳಾಸ ನಾನೇ ಬರೆಯುತ್ತೇನೆ. ನಿಡಿ.1 ರಲ್ಲಿ ವಿಳಾಸ ನಾನು ಬರೆದಿರುವುದಿಲ್ಲ, ಆದರೆ ಸಹಿ ಮಾಡಿರುತ್ತೇನೆ. ನಿಡಿ.2 ರ ಸಹಿ ಮತ್ತು ವಿಳಾಸ ನನ್ನದೇ ಆಗಿರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿ ಆರೋಗ್ಯವಾಗಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1 ರ ದಾಖಲೆಗೆ ನಾನು ಸಹಿ ಮಾಡದೇ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.